**OS No**.300/2022

**DW**-1

**ದಿನಾಂಕಃ 06-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಶ್ರೀ. ಎಮ್ ಎಸ್ ಹೆಚ್ ವಕೀಲರಿಂದ, ವಾದಿಯ ಪರವಾಗಿ.**

ನಮ್ಮ ತಂದೆಯ ತಂದೆ ಹೆಸರು ಪರಸಪ್ಪ ಎಂದರೆ ನಿಜ. ದಾವಾ ಅನುಸೂಚಿ 3 ರಿಂದ 5 ರ ಜಮೀನುಗಳು ನಮ್ಮ ಪೂರ್ವಜರಿಂದ ಬಂದಂತ ಸ್ವತ್ತುಗಳು ಎಂದರೆ ಗೊತ್ತಿಲ್ಲ. ನಮ್ಮ ತಂದೆ ಶಿವರಾಯಪ್ಪನ ಮರಣಾ ನಂತರ 2002 ನಾನು ಮತ್ತು ನನ್ನ ತಾಯಿ ಹಾಗೂ ಸಹೋದರ, ಸಹೋದರಿಯರು ದಾವಾ ಅನುಸೂಚಿ 3 ರಿಂದ 5 ಸ್ವತ್ತುಗಳಿಗೆ ನಮ್ಮ ಹೆಸರನ್ನು ಹಚ್ಚಿಕೊಂಡಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ ನಾನು ಆಗ ಚಿಕ್ಕವನಿದ್ದೆ.

ನಮ್ಮ ತಂದೆ ಮರಣಾ ನಂತರ ನಮ್ಮ ತಂದೆಯ ಉತ್ತರ ಜೀವಿತರ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದಿರಾ ಎಂದರೆ ಸಾಕ್ಷಿ ನಾನು ಚಿಕ್ಕವನಾಗಿದ್ದೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೀಗ 51 ವರ್ಷ ವಯಸ್ಸು. 2001 ರಲ್ಲಿ ನನಗೆ 25 ವರ್ಷ ವಯಸ್ಸು ಆಗಿರಬಹುದು ಎಂದರೆ ನನಗೆ ಲೆಕ್ಕಹಾಕಲು ಬರಲ್ಲ. ಪುನಃ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. 25 ನೇ ವರ್ಷದಲ್ಲಿ ನನಗೆ ವ್ಯವಹಾರ ಜ್ಞಾನ ಇತ್ತು ಎಂದರೆ ಸಾಕ್ಷಿ ನಮ್ಮ ತಾಯಿ ಎಲ್ಲ ವ್ಯವಹಾರ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. 25 ನೇ ವಯಸ್ಸಿನಲ್ಲಿ ಬಣ್ಣ ಹಚ್ಚುವವರ ಕೈಯಲ್ಲಿ ಕೆಲಸಕ್ಕೆ ಹೋಗುತ್ತಿದ್ದೆ.

ಜಮೀನುಗಳು ಹಾಗೂ ಮನೆ ಯಾವಾಗ ಮುಳುಗಡೆಯಾಗಿವೆ ಎನ್ನುವುದು ನನಗೆ ಗೊತ್ತಿಲ್ಲ. ನಮ್ಮ ತಾಯಿಗೆ ಗೊತ್ತು. ನಾನು ಕೆನರಾ ಬ್ಯಾಂಕಿನಲ್ಲಿ ಖಾತೆ ಹೊಂದಿರುತ್ತೇನೆ. ನಾನು ಸದರಿ ಖಾತೆಯನ್ನು 2003 ರಿಂದ ಹೊಂದಿರುತ್ತೇನೆ. ಸದರಿ ಖಾತೆ ಬಗ್ಗೆ ನನಗೆ ಮಾಹಿತಿ ಇದೆ. ನನ್ನ ಖಾತೆಗೆ ಜಮೀನುಗಳು ಮುಳುಗಡೆಯಾದ ವಿಚಾರವಾಗಿ ಪರಿಹಾರಧನ ಜಮಾ ಆದ ಬಗ್ಗೆ ಗೊತ್ತಿಲ್ಲ.

ನನ್ನ ಬ್ಯಾಂಕ ಸ್ಟೆಟಮೆಂಟನ್ನು ನಾನು ನೋಡುತ್ತೇನೆ. 2022 ರಲ್ಲಿ ಪರಿಹಾರಧನ ನನ್ನ ಬ್ಯಾಂಕ ಖಾತೆಗೆ ಜಮಾ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಪುನಃ ಸಾಕ್ಷಿ ಪರಿಹಾರಧನ ನನ್ನ ಬ್ಯಾಂಕ ಖಾತೆಗೆ ಜಮಾ ಆಗಿಲ್ಲ ಎಂದು ನುಡಿಯುತ್ತಾರೆ.

ನನ್ನ ಬ್ಯಾಂಕ ಖಾತೆ ಸ್ಟೆಟಮೆಂಟನ್ನು ನ್ಯಾಯಾಲಯದಲ್ಲಿ ಹಾಜರುಪಡಿಸುತ್ತೇನೆ. ನನ್ನ ತಾಯಿಗೆ ನಾನು ಅಧಿಕಾರ ಪತ್ರವನ್ನು ಬರೆದುಕೊಟ್ಟಿಲ್ಲ. 2022 ರಲ್ಲಿ ನಾನು ನನ್ನ ಸಹೋದರರು ಹಾಗೂ ಸಹೋದರಿಯರು ನನ್ನ ತಾಯಿಗೆ ಪರಿಹಾರಧನ ಪಡೆದುಕೊಳ್ಳಲು ಸಮ್ಮತಿಸಿ ಅಧಿಕಾರ ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

**OS No**.300/2022

**DW**-1

ನಮ್ಮ ಮನೆತನದ ಆಸ್ತಿಗಳ ಬಗ್ಗೆ ನನಗೆ ಏನು ಗೊತ್ತಿಲ್ಲ. ಮುಳುಗಡೆಯಾದ ಸ್ವತ್ತುಗಳು ನಮ್ಮ ಮನೆತನಕ್ಕೆ ಹೇಗೆ ಬಂದಿರುತ್ತವೆ ಎಂಬುದು ಗೊತ್ತಿಲ್ಲ. ನಮ್ಮ ತಂದೆಗೆ ಅಣ್ಣ-ತಮ್ಮಂದಿರು ಎಷ್ಟು ಜನ ಎಂಬುದು ಗೊತ್ತು. ನಮ್ಮ ತಂದೆಗೆ ಲಕ್ಷ್ಮಣ, ರಾಮಚಂದ್ರ, ಭಾಗಪ್ಪ, ಧಶರತ ಎಂಬ ಸಹೋದರರರು ಇದ್ದರು. ನನ್ನ ತಂದೆ ಸಹೋದರರರು ಕೂಡಿ ಇರಲಿಲ್ಲ ಬೇರೆ ಬೇರೆ ಇದ್ದರು. ಅವರ ಜಮೀನುಗಳು ಸಹ ಕೂಡಿ ಇರಲಿಲ್ಲ ಬೇರೆ ಬೇರೆ ಇದ್ದವು. ಅವರು ವಿಭಾಗ ಮಾಡಿಕೊಂಡಿದ್ದರೊ ಇಲ್ಲವೊ ಎಂಬುದು ಗೊತ್ತಿಲ್ಲ.

ನನ್ನ ಚಿಕ್ಕಪ್ಪ ಹಾಗೂ ದೊಡ್ಡಪ್ಪಂದಿರ ಜಮೀನುಗಳು ಮುಳುಗಡೆಯಾಗಿವೆ ಎಂದರೆ ಆಗಿವೆ ಆದರೆ ಗುರುತಿಸಲು ಆಗುವುದಿಲ್ಲ. ನನ್ನ ಚಿಕ್ಕಪ್ಪ ಹಾಗೂ ದೊಡ್ಡಪ್ಪರವರಿಗೆ ಜಮೀನಿಗೆ ಸಂಬಂದಿಸಿದ ಪರಿಹಾರಧನವನ್ನು ಅವರು ಪಡೆದುಕೊಂಡಿದ್ದರು ಹಾಗೂ ನಮ್ಮ ಜಮೀನಿಗೆ ಸಂಬಂದಿಸಿದಂ ಪರಿಹಾರಧನವನ್ನು ನಾವು ಪಡೆದುಕೊಂಡಿರುತ್ತೇವೆ ಎಂದರೆ ಸಾಕ್ಷಿ ನಾನು ಚಿಕ್ಕವನಾಗಿದ್ದೆ ನಮ್ಮತಾಯಿ ವ್ಯವಹಾರ ಮಾಡಿರುತ್ತಾಳೆ ಎಂದು ನುಡಿಯುತ್ತಾರೆ.

2011 ರಲ್ಲಿ ಸ್ವತ್ತುಗಳಿಗೆ ಸಂಬಂದಿಸಿದಂತೆ ಸರಕಾರದವರು ನಮಗೆ ನೋಟಿಸ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ ತಾಯಿಗೆ ಗೊತ್ತು. 2011 ರಲ್ಲಿ ನಮ್ಮ ಮನೆತನಕ್ಕೆ ಎಷ್ಟು ಆಸ್ತಿಗಳು ಇವೆ ಎಂದು ತಿಳಿದುಕೊಳ್ಳಲು ನಾನು ಪ್ರಯತ್ನ ಮಾಡಿಲ್ಲ.

ನಾನು ನನ್ನ ತಾಯಿ ಹಾಗೂ ಸಹೋದರಿಯರು ಸೇರಿ ಅಸಲು ದಾವಾ ನಂ. 237/2021 ರಂತೆ ದಾವೆ ಮಾಡಿದ್ದೆವು ಎಂದರೆ ಸರಿಯಲ್ಲ. ಸದರಿ ದಾವೆ ಮಾಡಿಸುವ ಸಮಯದಲ್ಲಿ ನಮ್ಮ ಮನೆತನಕ್ಕೆ ಎಷ್ಟು ಆಸ್ತಿಗಳು ಇವೆ ಎಂದು ತಿಳಿದುಕೊಳ್ಳಲು ನಾನು ಪ್ರಯತ್ನ ಮಾಡಿದ್ದಿರಾ ಎಂದರೆ ಸಾಕ್ಷಿ ಅವಾಗ ನನಗೆ ಆರೋಗ್ಯ ಸರಿ ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯನ್ನು ನಾನೇ ನನ್ನ ತಾಯಿ ಹಾಗೂ ಸಹೋದರಿಯರ ವಿರುದ್ದ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ವಿದ್ಯಾಗಿರಿಯಲ್ಲಿರುವ ಮನೆಗೆ ಸಂಬಂದಿಸಿದಂತೆ ಕೇಸು ಹಾಕಿ ರಾಜೀ ಮಾಡಿಕೊಂಡಿದ್ದರೊ ಇಲ್ಲವೊ ಎಂದರೆ ನೆನಪಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಮಾಹಿತಿಯನ್ನು ನಾನೇ ವಕೀಲರ ಮೂಲಕ ಬರೆಸಿರುತ್ತೇನೆ ಆದರೆ ಬರೆದ ವಿಚಾರಗಳು ಈಗ ನೆನಪಿಲ್ಲ.

ನಮ್ಮ ಮನೆತನಕ್ಕೆ ದಾವಾ ಅನುಸೂಚಿ 3 ರಿಂದ 5 ರ ಸ್ವತ್ತುಗಳಿದ್ದು, ನಮ್ಮ ತಾಯಿ ಪರಿಹಾರಧನವನ್ನು ಪಡೆದುಕೊಂಡಿರುತ್ತಾಳೆ ಎಂದರು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಪ್ರಸ್ತುತ ದಾವೆಯಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ನಾನು ನಮ್ಮ ವಕೀಲರ ಮೂಲಕ ತಿಳಿದುಕೊಂಡಿರುತ್ತೇನೆ. ಸದರಿ ಸ್ವತ್ತುಗಳು ನಮ್ಮ ಮನೆತನಕ್ಕೆ ಹೇಗೆ ಬಂದಿರುತ್ತವೆ ಅಂತ ನಾನು ತಿಳಿದುಕೊಂಡಿರುತ್ತೇನೆ ಅವು ನಮ್ಮ ಮುತ್ಯಾನ ಕಾಲದಿಂದ ಬಂದಿರುತ್ತವೆ.

ದಾವಾ ಅನುಸೂಚಿ 3 ರಿಂದ 5 ರ ಸ್ವತ್ತುಗಳು ಮುಳುಗಡೆಯಾಗಿವೆ ಅಂತ ನಮ್ಮ ವಕೀಲರಿಗೆ ಹೇಳಿರುತ್ತೇನೆ. ಆದರೆ ಯಾವಾಗ ಅಂತ ಗೊತ್ತಿಲ್ಲ. ಮುಳುಗಡೆಯಲ್ಲಿ ನನಗೆ ಸೇರಿದ ಎಷ್ಟು ಆಸ್ತಿಗಳು ಹಾಗೂ ವಾದಿಗೆ ಸೇರಿದ ಎಷ್ಟು ಆಸ್ತಿಗಳು ಹೋಗಿರುತ್ತವೆ ಅಂತ ಹೇಳಿದಿರಾ ಎಂದರೆ ಸಾಕ್ಷಿ ನಮಗೆ ಸೇರಿದ 4 ಎಕರೆ ಮುಳುಗಡೆ ಆಗಿತ್ತು ಅಂತ ವಕೀಲರಿಗೆ ಹೇಳಿರುತ್ತೇನೆ.

ಜಮೀನಿಗೆ ಸಂಬಂದಿಸಿದಂತ ಪಹಣಿ ಪತ್ರಿಕೆಗಳನ್ನು ನೋಡಿರುತ್ತೇನೆ. ಸದರಿ ಪಹಣಿ ಪತ್ರಿಕೆಯಲ್ಲಿ ನನ್ನ ನಮ್ಮ ತಾಯಿ, ಸಹೋದರ-ಸಹೋದರಿಯರ ಹೆಸರು ಇವೆ ಎಂದರೆ ನೆನಪಿಲ್ಲ. ಸಾಕ್ಷಿಗೆ ನಿಪಿ10 ರಿಂದ 12 ರಲ್ಲಿ ನನ್ನ ಮತ್ತು ನನ್ನ ತಾಯಿ, ಸಹೋದರ-ಸಹೋದರಿಯರ ಹೆಸರು ಇವೆ ಎಂದರೆ ನಿಜ. ಸದರಿ ಪಹಣಿ ಪತ್ರಿಕೆಗಳಲ್ಲಿ ನಮ್ಮ ಚಿಕ್ಕಪ್ಪಂದಿರಿಗೆ ಸೇರಿದ 4 ಗುಂಟೆ ಜಮೀನು ಬೇರೆ ಹಾಗೂ ನಮ್ಮ ಮನೆತನಕ್ಕೆ ಸೇರಿದ 4 ಗುಂಟೆ ಬೇರೆ ಅಂತ ತೋರಿಸಿರುತ್ತಾರೆ. ಮುಳುಗಡೆಯಾದ ಜಮೀನುಗಳ ಬಗ್ಗೆ ಪಹಣಿ ಪತ್ರಿಕೆಯಲ್ಲಿ ನನ್ನ ಮತ್ತು ನನ್ನ ತಾಯಿ, ಸಹೋದರ- ಸಹೋದರಿಯರ ಹೆಸರನ್ನು ಜಂಟಿಯಾಗಿ ನಮೂದಿಸಿರುತ್ತಾರೆ ಎಂದರೆ ನಿಜ.

ಸರ್ವೆ ನಂ. 314 ರಲ್ಲಿ 4 ಗುಂಟೆ, ಸರ್ವೆ ನಂ. 315 ರಲ್ಲಿ 22 ಗುಂಟೆ, ಸರ್ವೆ ನಂ. 457/2 ರ 11 ಗುಂಟೆ ಜಮೀನುಗಳ ಪಹಣಿ ಪತ್ರಿಕೆಗಳಲ್ಲಿ ನನ್ನ ಮತ್ತು ನನ್ನ ತಾಯಿ, ಸಹೋದರ- ಸಹೋದರಿಯರ ಹೆಸರು ನಮೂದಾಗಿದೆ ಎಂದರೆ ಸಾಕ್ಷಿ ಈಗಿಗ ಸೇರಿಸಿರಬಹುದು ಎಂದು ನುಡಿಯುತ್ತಾರೆ.

ಮುಳುಗಡೆಯಾದ ಜಮೀನುಗಳಲ್ಲಿ ಭಾಗ ನೀಡಬೇಕಾಗುತ್ತದೆ ಅಂತ ಭಾವಿಸಿ ಎಲ್ಲಾ ಜಮೀನುಗಳು ಮುಳುಗಡೆಯಾಗಿವೆ ಅಂತ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ. ಹೆಚ್ ಬಿ ಎಸ್ ವಕೀಲರಿಂದ, 1 ಮತ್ತು 8 ನೇ ಪ್ರತಿವಾದಿಯ ಪರವಾಗಿ ವಾದಿ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡು ಮುಂದುವರೆದ ಪಾಟೀ ಸವಾಲು ಮಾಡುವುದಾಗಿ ನುಡಿಯುತ್ತಾರೆ.**

ಅಸಲು ದಾವಾ ನಂ. 237/2011 ರ ದಾವೆಯನ್ನು ನಾನು ಮಾಡಿಲ್ಲ ಎಂದರೆ ಗೊತ್ತಿಲ್ಲ ಹಾಗೂ ನೆನಪಿಲ್ಲ. ಸದರಿ ದಾವೆಯಲ್ಲಿ ಆದ ರಾಜೀ ಪತ್ರ ಖೊಟ್ಟಿಯಾಗಿದೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಯಾರು ಯಾರ ವಿರುದ್ಧ ಮಾಡಿದ್ದರು ಎನ್ನುವುದು ಗೊತ್ತು. ಸದರಿ ದಾವೆಯನ್ನು ಮಲ್ಲಿಕಾರ್ಜುನ ನನ್ನ ವಿರುದ್ಧ ಮಾಡಿದ್ದ. ಸದರಿ ದಾವೆಗೆ ನಾನು ಮತ್ತು ಮಲ್ಲಿಕಾರ್ಜುನ ಮಾತ್ರ ಪಕ್ಷಗಾರರು ಎಂದರೆ ನಿಜ. ನನ್ನ ತಮ್ಮ

ಬಸವರಾಜನಿಗೆ ತಿಳುವಳಿಕೆ ಇಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮ ಬಸವರಾಜನಿಗೆ ವ್ಯವಹಾರ ಜ್ಞಾನ ಇಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ಅದನ್ನೆಲ್ಲ ನಾವೇ ನೋಡಿಕೊಳ್ಳುತ್ತೇವೆ ಎಂದು ನುಡಿಯುತ್ತಾರೆ. ಸದರಿ ಬಸವರಾಜ ಮಾತನಾಡುವ ಸ್ಥಿತಿಯಲ್ಲಿ ಇಲ್ಲ ಎಂದರೆ ಸರಿಯಲ್ಲ.

ಸದರಿ ರಾಜೀ ಡಿಕ್ರಿ ಪ್ರಕಾರ ಯಾರಿಗೆ ಯಾವ ಜಮೀನು ಬಂದಿರುತ್ತದೆ ಎಂಬುದು ಗೊತ್ತಿಲ್ಲ. ದಾವಾ ಸ್ವತ್ತುಗಳಲ್ಲಿ ಮಾಲತಿ ಮತ್ತು ಕಸ್ತೂರಿರವರಿಗೆ ಹಕ್ಕಿದೆ ಎಂದರೆ ಸರಿಯಲ್ಲ. ವಾರಸಾನಾತೆಯಿಂದ ಕಸ್ತೂರಿ ಮತ್ತು ಮಾಲತಿರವರ ಹೆಸರು ಪಹಣಿ ಪತ್ರಿಕೆಗೆ ಸೇರಿಸಿದ್ದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಮ್ಮ ಹಿರಿಯರ ಆಸ್ತಿ ಮುಳುಗಡೆಯಾಗಿದ್ದಕ್ಕೆ ನಮ್ಮ ತಾಯಿಗೆ ನಿವೇಶನ ಬಂದಿದೆ ಎಂದರೆ ಬಂದಿರಬಹುದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸದರಿ ನಿವೇಶನ ಮುಳುಗಡೆಗೆ ಸಂಬಂದಿಸಿದ್ದಲ್ಲ ಎಂದು ನುಡಿಯುತ್ತಾರೆ. ಬಾಡಿಗೆ ಮಳಿಗೆಗಳಿಂದ ಬರುವಂತ ಬಾಡಿಗೆಯನ್ನು ನಮ್ಮ ತಾಯಿ ಹೆಸರಿಗೆ ಜಮಾ ಆಗುತ್ತಿತ್ತು ಎಂದರೆ ನಿಜ. ಸದರಿ ಹಣದಲ್ಲಿ ಮಾಲತಿ ಮತ್ತು ಕಸ್ತೂರಿಗೆ ಸ್ವಲ್ಪ ಹಣ ನೀಡುತ್ತಿದ್ದರು ಎಂದರೆ ಸರಿಯಲ್ಲ. ಎರಡು ಮನೆಗಳ ಪೈಕಿ ಒಂದು ಮನೆಯಲ್ಲಿ ನಮ್ಮ ತಾಯಿ ಮರಣ ಹೊಂದುವವರೆಗೆ ಕಸ್ತೂರಿ ಮತ್ತು ಮಾಲತಿ ವಾಸಗಿದ್ದರು ಎಂದರೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯವಕಾಶ ಕೋರಿದ್ದರ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆಎಂಎಫ್‌ಸಿ, ಬಾಗಲಕೋಟೆ.

**DW**-1

**ದಿನಾಂಕಃ 06-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಶ್ರೀ. ಹೆಚ್ ಬಿ ಎಸ್ ವಕೀಲರಿಂದ, 1 ಮತ್ತು 8 ನೇ ಪ್ರತಿವಾದಿಯ ಪರವಾಗಿ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆಎಂಎಫ್‌ಸಿ, ಬಾಗಲಕೋಟೆ.

**DW**-1

**ದಿನಾಂಕಃ 21-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ. ಟಿ ಆರ್ ಕೆ ವಕೀಲರಿಂದ, ಪ್ರತಿವಾದಿಗಳ ಪರವಾಗಿ:**

ನನ್ನ ಮುಂದುವರೆದ ಮುಖ್ಯ ವಿಚಾರಣೆಯನ್ನು ನನ್ನ ಹೆಚ್ಚುವರಿ ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಸದರಿ ಹೆಚ್ಚುವರಿ ಪ್ರಮಾಣ ಪತ್ರದಲ್ಲಿ ಬರೆಯಲಾಗಿರುವ ಅಂಶಗಳು ನನಗೆ ತಿಳಿದಿದ್ದು ಸತ್ಯಾಂಶದಿಂದ ಕೂಡಿರುತ್ತದೆ ಹಾಗೂ ಅದರಲ್ಲಿರುವ ಸಹಿ ನನ್ನ ಸಹಿ ಆಗಿರುತ್ತದೆ.

ಪಾಟೀ ಸವಾಲಿಗೆ ಸಮಯ ಕೇಳಿದ್ದರ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆಎಂಎಫ್‌ಸಿ, ಬಾಗಲಕೋಟೆ.